“ಗುಡ್ ಮಾರ್ನಿಂಗ್ ಫ್ರೆಂಡ್ಸ್, ದಿಸ್ ಇಸ್ ಯುವರ್ ಫ್ರೆಂಡ್ ಶೆರ್ಲಿ” ಎನ್ನುತ್ತಾ ಉತ್ಸಾಹದಿಂದಲೇ ನಮ್ಮನ್ನು ಸ್ವಾಗತಿಸಿದಳು. ಗ್ರೀನ್ ಫ್ರಾಕಿನಲ್ಲಿ ಬಹಳ ಮುದ್ದಾಗಿ ಕಾಣುತ್ತಿದ್ದಳು. ನಿನ್ನೆಯ ದುಃಖವನ್ನು ಆದಷ್ಟು ಮರೆಯಲು ಪ್ರಯತ್ನಿಸಿದಂತೆ ಕಾಣಿಸಿತು.

ಶಾಂಗೈ, ಅತ್ಯಾಧುನಿಕ ನಗರ. ಕಟ್ಟಡಗಳ ವಾಸ್ತುಶಿಲ್ಪ ಯೂರೋಪಿನ ಕಟ್ಟಡಗಳನ್ನು ಹೋಲುತ್ತಿತ್ತು. ಯಾವುದೋ ಮಾಲ್‌ನ ಮುಂದೆ ನಿಲ್ಲಿಸಿ ನಮ್ಮನ್ನು ಶಾಪಿಂಗ್ ಮಾಡಲು ಬಿಟ್ಟರು.

ಎಲ್ಲರೂ ಅತ್ತ ಹೊರಟರೆ, ನಾನು ಶೆರ್ಲಿಯನ್ನು ಮೆಲ್ಲನೆ ಮಾತಿಗೆಳೆದೆ. ನನ್ನ ಮಾತನ್ನು ತುಂಡರಿಸಿ, “ನಿನ್ನ ಬಗ್ಗೆ ಹೇಳು ರಿಷಿಕಾ, ಮದುವೆಯಾಗಿದೆಯಾ? ಏನೆನ್ನುತ್ತಾರೆ ಮುಂಬೈ ಜನರು, ನೀನೇಕೆ ಎಲ್ಲರಂತೆ ಎಂಜಾಯ್ ಮಾಡುತ್ತಿಲ್ಲ? ಏನೋ ಇದೆ”.

ಒಮ್ಮೆಲೆ ಹಿಮ್ಮೆಟ್ಟಿದೆ, ಯಾರಿವಳು ಇವಳ ಹತ್ತಿರ ನಾನೇಕೆ ಎಲ್ಲವನ್ನೂ ಹೇಳಬೇಕು, ಏನೋ ಒಂದು ಹೇಳಿದರಾಯಿತು ಎಂದುಕೊಂಡು ಬಾಯಿ ತೆರೆದೆ. ಆದರೆ, ಮನಸ್ಸು ಸತ್ಯ ಹೇಳಿಬಿಡು ಎಂದಿತು. ಮನಸ್ಸಿನ ತರ್ಕ, ವಿತರ್ಕದಲ್ಲಿ ಗೊಂದಲವಾಯಿತು. ಕೊನೆಗೆ ಇವಳ ಹತ್ತಿರವಾದರೂ ಸತ್ಯ

